ಸಂಪೂರ್ಣ ಬಂದಾಗುತ್ತದೆ. ಅತ್ಯಂತ ಪ್ರಮುಖವಾದ ಹೆದ್ದಾರಿಯದು. ಹಣವಿಲ್ಲವಾದರೆ, ಬಿ.ಓ.ಟಿ. ಸಿಸ್ಟಂನಲ್ಲಿ ಸೇರಿಸಿದರೆ, ಖಾಸಗಿಯವರು ಬರುತ್ತಾರೆ, ನಾವು ಅವರಿಗೆ ಪ್ರೋತ್ಸಾಹ ಕೊಡಬಹುದು. ತಮ್ಮ ಇಲಾಖೆಯಿಂದ ಏನು ತ್ವರಿತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಕೇಳುತ್ತೇನೆ. ಹತ್ತಾರು ವರ್ಷಗಳಿಂದ ಆ ಭಾಗದ ಜನರು ಇದಕ್ಕೆಂದು ಮನವಿ ಮಾಡುತ್ತಿದ್ದಾರೆ. ಸರ್ಕಾರದ ಕಡೆಯಿಂದ ಸರಿಯಾದ ಭರವಸೆ ಮತ್ತು ಕೆಲಸವಾಗುತ್ತಿಲ್ಲ. ಚಂದ್ರೇಗೌಡರಿಗೂ ಇದು ಗೊತ್ತಿದೆ.

ಶ್ರೀ ಧರ್ಮಸಿಂಗ್ :— ಬಿಟಿಟಿಯಲ್ಲಿ ನಾವು ಅಡ್ವೆಂಚರ್‌ಟೈಸ್ ಮಾಡುತ್ತೇವೆ. ಖಾಸಗಿಯವರು ಬಂದರೆ ಅವರಿಗೆ ವಹಿಸುತ್ತೇವೆ. ಬಂದರು ಖಾತೆಯ ಸಚಿವರು, ನಾನು ಸೇರಿ, ಅಧಿಕಾರಿಗಳ ಜೊತೆ ಸಮಾಲೋಚಿಸಿ ಪರಿಶೀಲಿಸುತ್ತೇವೆ.

ಶ್ರೀ ಎಸ್. ಎಸ್. ಪಾಟೀಲ್ :— ಇದು ಬಹಳ ಮಹತ್ವದ್ದೆಂದು ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಕೊಟ್ಟಿದ್ದಿರಿ.

Mr. Speaker :— Within five minitues, we have B.A.C. meeting. ಅಲ್ಲಿ ಡಿಸ್ಕಡ್ ಮಾಡಿ ಬಂದು ಹೇಳುತ್ತೇನೆ. ನಮ್ಮ ಕಾರ್ಯಕ್ರಮದ ಪ್ರಕಾರ ಡಾ: ರಾಜ್‌ಕುಮಾರ್ ರವರ ಬಗ್ಗೆ ಚರ್ಚೆ ಇತ್ತು. ಈಗ ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಸಚಿವರು ತುರ್ತು ಪತ್ರ ಕಳುಹಿಸಿ, 3-4 ಬಿಲ್‌ಗಳನ್ನು ಮುಗಿಸಿಕೊಡಬೇಕೆಂದು ಹೇಳಿದ್ದಾರೆ. 10 ನಿಮಿಷ ಸಭೆಯನ್ನು ಮುಂದೂಡೋಣ. ಬಿಎಸಿ ಸದಸ್ಯರು ಬನ್ನಿ.

Sri D.B. Chandregowda :— There is no need to adjourn the House.

Mr. Speaker :— We will come back after BAC meeting. The House can go on.

(2) ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ವಿಷಯ: ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿಯ ಒಬ್ಬ ಹೆಣ್ಣು ಮಗಳ ಮಾನಾಪಹರಣವಾಗಿರುವುದು.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನಲ್ಲಿ ಒಬ್ಬ ಹರಿಜನ ಹೆಣ್ಣು ಮಗಳ ಮಾನಾಪಹರಣವಾಗಿದೆ. ಕಳೆದ ಮೂರು - ನಾಲ್ಕು ದಿನಗಳ ಹಿಂದೆ ಇದು ನಡೆದಿದೆ. 18ನೇ ತಾರೀಖು ಹೊಳಲ್ಕೆರೆ ತಾಲ್ಲೂಕಿನಲ್ಲಿ ಒಂದು ಸಣ್ಣ ಹಳ್ಳಿಯಲ್ಲಿ ನಡೆದ ಘಟನೆ ಇದುವರೆಗೂ ಸರ್ಕಾರದ

ಗಮನಕ್ಕೆ ಬಂದಿಲ್ಲವೆ? ಬಂದಿದ್ದರೆ, ಸರ್ಕಾರವೇನು ಕ್ರಮ ತೆಗೆದುಕೊಂಡಿದೆ ಎಂಬುದು ಸದನ ನಡೆಯುತ್ತಿರುವ ಸಂದರ್ಭದಲ್ಲಿ ಗೊತ್ತಾಗಬೇಕು. ಕಾರಣವೇನೆಂದರೆ, ಪ್ರಜಾತಂತ್ರ ವ್ಯವಸ್ಥೆ ಬಂದು 50 ವರ್ಷಗಳಾದರೂ, ಒಬ್ಬ ಹೆಣ್ಣುಮಗಳನ್ನು ಹಗಲು ಹೊತ್ತಿನಲ್ಲಿ ಎಳೆದುಕೊಂಡು ಬಂದು, ಆಕೆಯ ಸೀರೆ ಎಳೆದು, ರವಿಕೆ ಮತ್ತು ಲಂಗದ ಮೇಲೆ ಬೀದಿಯಲ್ಲಿ ನಿಲ್ಲಿಸಿ, ಅವಾಚ್ಯ ಶಬ್ದಗಳಿಂದ ಬೈಯ್ದು, ಅವಮಾನ ಮಾಡಿರುವುದು ಇಡೀ ಸಮಾಜಕ್ಕೆ ಮಾಡಿರುವ ಅಗೌರವವೆಂದು ನಾನಾದರೂ ಭಾವಿಸುತ್ತೇನೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ? ಪೋಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ಕೊಟ್ಟಿದ್ದರೆ? ಜಿಲ್ಲಾ ಮಂತ್ರಿಗಳು ಭೇಟಿ ನೀಡಿದ್ದರೆ? ಅದರ ಬಗ್ಗೆ ವಿಚಾರಣೆ ನಡೆದಿದೆಯೇ? ಸಮಾಜ ಕಲ್ಯಾಣಾಧಿಕಾರಿಗಳು ಸ್ಥಳಕ್ಕೆ ಹೋಗಿದ್ದರೆ? ಸವರ್ಣೀಯರಿಗೂ - ಹರಿಜನರಿಗೂ ಬಹಳ ದಿನಗಳಿಂದ ಅಲ್ಲಿ ವೈಮನಸ್ಯವಿತ್ತು. ಅಲ್ಲಿರುವ ಕೆ.ಇ.ಬಿ. ಪೋಲ್ ಅನ್ನು ಫಿಟ್ ಮಾಡಿದ್ದಕ್ಕೆ ಈ ಸಮಸ್ಯೆ ಶುರುವಾಯಿತು. ಅದಕ್ಕೆ ಮುಂಚೆ, ಅಲ್ಲಿನ ಜಿಲ್ಲಾ ಮಂತ್ರಿಗಳಾಲಿ, ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳಾಗಲಿಸ ಜಿಲ್ಲಾಧಿಕಾರಿ ಅಥವಾ ಎಸ್.ಪಿ ಇರಬಹುದು, ಎರಡೂ ಕಡೆಯವರನ್ನು ಕರೆಸಿ, ಮಾತನಾಡಬೇಕಾಗಿತ್ತು. ಅಲ್ಲಿ ಕೇವಲ ಪೋಲ್ ಮತ್ತು ಬೋರ್‌ವೆಲ್ ಇತ್ತು. ಆ ಕೆ.ಇ.ಬಿ. ಪೋಲ್‌ನ್ನು ಶಿಫ್ಟ್ ಮಾಡಿದ್ದಕ್ಕೆ ಇದು ಪ್ರಾರಂಭವಾಗಿದ್ದು, ಈ ಇನ್ಸಿಡೆಂಟ್ ಆದಮೇಲೆ ನೀವು ಪರಿಹಾರವನ್ನು ಕೊಡುವುದು ಸರಿ; ಆದರೆ ಆ ಮಹಿಳೆಯ ಹೋದ ಮಾನವನ್ನು ನಾವು ಯಾರೂ ಕೊಡುವುದಕ್ಕಾಗುವುದಿಲ್ಲ. ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ? ಇವತ್ತು ಇದೊಂದು ಬಹಳ ಪ್ರಮುಖವಾದಂಥ ವಿಚಾರ, ನೀವು ಕಾನೂನು ಸುವ್ಯವಸ್ಥೆ ಬಹಳ ಚೆನ್ನಾಗಿ ಇದೆ ಎಂದು ಹೇಳುತ್ತೀರಿ. ಮಹಿಳೆಯರಿಗೆ ಆಶ್ರಯ ಕೊಡುತ್ತೇವೆಂದು ಹೇಳುತ್ತೀರಿ, ಇವತ್ತು ಮಹಿಳೆಯ ಮೇಲೆ ದೌರ್ಜನ್ಯವಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೀರಾ? ಕ್ರಮವನ್ನು ತೆಗೆದುಕೊಡಿದ್ದರೆ ಇನ್ನು ಮುಂದೆ ಆ ರೀತಿ ಆಗದೇ ಇರುವಂತೆ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಆಗ್ರಹ ಮಾಡುತ್ತೇನೆ.

(ಈ ಹಂತದಲ್ಲಿ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಬಿ. ಸೋಮಶೇಖರ (ಮಳವಳ್ಳಿ) :— ಮಾನ್ಯ ಉಪಾಧ್ಯಕ್ಷರೆ, ಜಾತಿಯ ವ್ಯವಸ್ಥೆಯೊಳಗಡೆ ಒಬ್ಬ ಹರಿಜನ ಮಹಿಳೆಯನ್ನು ಹಗಲಿನಲ್ಲಿ ಹೊರಗಡೆ ಕರೆದುಕೊಂಡು ಹೋಗಿ ಬಟ್ಟೆಗಳನ್ನು ಬಿಚ್ಚಿ ಅವಮಾನ ಮಾಡಿದ್ದಾಗಿದೆ. ಅದೇ ಜಾತಿಯಿಂದ ಬಂದಿರುವ ನಮ್ಮ ಗೃಹ ಸಚಿವರು ಇರುವಾಗ ಮಾಡಿದ್ದಾರೆಂದರೆ, ಈ ಪರಿಸ್ಥಿತಿ ಏನಾಗಬಹುದು? ನಮ್ಮ ಮಾನ್ಯ ನಾಯಕರು ಹೇಳಿದ ಹಾಗೆ, ಈ ಕೃತ್ಯವನ್ನು ಮಾಡಿದ ವ್ಯಕ್ತಿಗಳ ಮೇಲೆ ಅಟ್ರಾಸಿಟಿ ಕೇಸ್ ಬುಕ್ ಮಾಡಿದ್ದಾರೆಯೇ? ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ?

ಕೆ.ಇ.ಬಿ. ಫೋಲು ಬದಲಾವಣೆ ಮಾಡಿದ್ದರಿಂದ ಆಗಿದೆ ಎಂದು ಹೇಳುತ್ತಾರೆ, ಆದರೆ ಈ ವಿವಾದ ಇವತ್ತು ಹುಟ್ಟಿಕೊಂಡಿದ್ದು ಅಲ್ಲ, ಇದು ಬಹಳ ವರ್ಷದಿಂದ ನಡೆದಿರುವ ವಿವಾದವಾಗಿದೆ. ಇದರ ಬಗ್ಗೆ ಮೊದಲೇ ಏಕೆ ಕ್ರಮವನ್ನು ಪೊಲೀಸ್ ಅಧಿಕಾರಿಗಳು ತೆಗೆದುಕೊಳ್ಳಲಿಲ್ಲ. ಕೇಸ್ ಬುಕ್ ಮಾಡಿದ್ದರೆ ಯಾವ ಸೆಕ್ಷನ್ ಪ್ರಕಾರ ಮಾಡಲಾಗಿದೆ ಎನ್ನುವ ಬಗ್ಗೆ ಸದನದ ಗಮನಕ್ಕೆ ತರಬೇಕೆಂದು ನಾನು ಕೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಉಪಾಧ್ಯಕ್ಷರೆ, ಇದೊಂದು ಬಹಳ ಅಮಾನುಷವಾದ ಘಟನೆಯಾಗಿದೆ. ಕಂಬಾಲಪಲ್ಲಿಯಲ್ಲಿ 7 ಜನ ದಲಿತರ ಮೇಲೆ ಹತ್ಯೆ ಏನಾಯಿತು ಅದು ಈ ಸರ್ಕಾರ ಬಂದಮೇಲೆ ಇವತ್ತು ಪುನರಾವರ್ತನೆ ಯಾಗುತ್ತಿದೆ. ದಲಿತ ಮಹಿಳೆಯ ಮೇಲೆ ಇಂತಹ ಒಂದು ಅಮಾನುಷವಾದ ಅತ್ಯಾಚಾರವಾಗಿದ್ದು ಖಂಡನೀಯವಾದದ್ದು. ಇದರಲ್ಲಿ ಯಾವ ದೊಡ್ಡ ವ್ಯಕ್ತಿಗಳು ಇದ್ದರೂ ಸಹ, ತಕ್ಷಣವೇ ಅವರ ಮೇಲೆ ಕಾನೂನಿನ ಕ್ರಮ ಕೈಗೊಳ್ಳುವುದರ ಜೊತೆಗೆ ಅವರಿಗೆ ಶಿಕ್ಷೆಯಾಗಬೇಕು. ಇದರ ಬಗ್ಗೆ ಸರ್ಕಾರ ತಕ್ಷಣವೇ ಸ್ಪಂದನೆ ಮಾಡ, ಜಿಲ್ಲಾ ಮಂತ್ರಿಗಳು, ದಲಿತ ವರ್ಗದಿಂದ ಬಂದಿರುವ ಗೃಹ ಮಂತ್ರಿಗಳು ಇದ್ದಂಥ ಸಂದರ್ಭದಲ್ಲಿ, ದಲಿತರ ಮೇಲೆ ಅನ್ಯಾಯವಾಗುತ್ತದೆ. ಇವತ್ತು ಅವರ ಹೆಸರನ್ನು ಹೇಳಿಕೊಂಡು ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ, ದಲಿತರು ಕಾಂಗ್ರೆಸ್‌ಗೆ ಹೆಚ್ಚಿನ ಮತವನ್ನು ಕೊಟ್ಟಿದ್ದಾರೆಂದು ಹೇಳುವ ಸಂದರ್ಭದಲ್ಲಿ, ಈ ಒಂದು ವರ್ಗದ ಜನರಿಗೆ ಈ ಸರ್ಕಾರದಲ್ಲಿ ಪ್ರತಿನಿತ್ಯ ಅನ್ಯಾಯವಾಗುವುದನ್ನು ನಾವು ನೋಡುತ್ತಿದ್ದೇವೆ. ಇದರ ಹಿನ್ನಲೆಯಲ್ಲಿ ಯಾರಿದ್ದಾರೆ, ಈಗಾಗಲೇ ತಾವು ಇದರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ? ಇದರ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ, ಯಾರನ್ನು ಅರೆಸ್ಟ್ ಮಾಡಿದ್ದೀರಿ? ಇದರ ಬಗ್ಗೆ ಸ್ಪಷ್ಟವಾದ ಒಂದು ಹೇಳಿಕೆಯನ್ನು ಸರ್ಕಾರ ಕೊಡುವುದರ ಜೊತೆಗೆ ಕ್ರಮವನ್ನು ಕೈಗೊಳ್ಳಬೇಕು.

ಶ್ರೀ ಕೆ.ಜೆ. ರಂಗನಾಥ್ (ಮಾನ್ಯ ಅರಣ್ಯ ಸಚಿವರು) :— ಮಾನ್ಯ ಉಪಾಧ್ಯಕ್ಷರೆ ಮಾನ್ಯ ಪಿ.ಜಿ.ಆರ್. ಸಿಂಧ್ಯರವರು, ಜಿಲ್ಲಾ ಮಂತ್ರಿಗಳು ಎನ್ನುವ ರೀತಿಯಲ್ಲಿ ಹೇಳಿರುವುದರಿಂದ ನಾನು ಪ್ರಸ್ತಾಪ ಮಾಡುವುದಕ್ಕೆ ನಿಂತಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ ಗೃಹ ಇಲಾಖೆಯವರು ಉತ್ತರವನ್ನು ಕೊಡಬೇಕಾಗುತ್ತದೆ. ಅಲ್ಲಿ ಏನು ವಿವಾದ ಇತ್ತು ಎನ್ನುವುದರ ಬಗ್ಗೆ ನನಗೆ ಮಾಹಿತಿ ಇಲ್ಲ ಹಾಗೂ ಯಾವ ಅರ್ಜಿ ಕೂಡ ಬಂದಿರುವುದಿಲ್ಲ. ಈ ವಿಷಯದ ಬಗ್ಗೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ನನಗೆ ಫೋನ್ ಮಾಡಿದ್ದಾರೆ. ಇದು ಜಿಲ್ಲೆಯ ಕೊನೆಯ ಗ್ರಾಮವಾದ ಒಂದು ಉತ್ತರಗೇನ ಹಳ್ಳಿ, ಇದು ಹೊಳಲ್ಕೆರೆ ತಾಲ್ಲೂಕಿನಲ್ಲಿದಮ, ಆ ಗ್ರಾಮ ನನಗೆ ಗೊತ್ತಿದೆ. ಆ ಗ್ರಾಮದ ಜನರು ಬಹಳ ಮುಗ್ದರು. ಆ ಘಟನೆ ಹೇಗೆ ನಡೆದಿದೆ ಎನ್ನುವುದರ ಬಗ್ಗೆ ನಾನು ಆಳವಾಗಿ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಹೆಣ್ಣು ಮಕ್ಕಳಿಗೆ ಅವಮಾನವಾಗಬಾರದು, ಅದರಲ್ಲಿ ಅಸ್ಪೃಶ್ಯ ಹೆಣ್ಣುಮಕ್ಕಳಿಗೆ ಅವಮಾನವಾಗುವುದರ ಬಗ್ಗೆ ಬೇರೆ ಕಾನೂನಿನಲ್ಲಿಯೇ ಬರುತ್ತದೆ.

ಮಾನ್ಯ ಜಗದೀಶ್ ಶೆಟ್ಟರ್ ಮೊದಲೇ ಮಾತನಾಡಿದ್ದರೆ ಬಹಳ ಚೆನ್ನಾಗಿ ಇರುತ್ತಿತ್ತು. ಏಕೆಂದರೆ, ನಿಮ್ಮಿಂದಲೇ ನಾಲ್ಕು ವರ್ಣಗಳು ಹುಟ್ಟಿದ್ದು, ನಿಮ್ಮಿಂದ ಅಂದರೆ ನಿಮ್ಮ ಪಕ್ಷದ ನೀತಿಯಿಂದ.

ಶ್ರೀ ಎಸ್. ಸುರೇಶ್ ಕುಮಾರ್:— ನಮ್ಮ ಪಕ್ಷ ಬಂದಿರುವುದು 1980ರಲ್ಲಿ.

ಶ್ರೀ ಕೆ.ಹೆಚ್. ರಂಗನಾಥ್:— ನಾನು ಮಾನ್ಯ ಸುರೇಶ್ ಕುಮಾರ್‌ರವರನ್ನು ಬುದ್ಧಿವಂತರೆಂದು ತಿಳಿದುಕೊಂಡಿದ್ದೆ.

ಶ್ರೀ ಎಸ್. ಸುರೇಶ್ ಕುಮಾರ್:— ತಾವು ನನ್ನ ಬಗ್ಗೆ ಏನಾದರೂ ತಿಳಿದುಕೊಳ್ಳಿ. ನಾನು ನಗುವುದಿಲ್ಲವೆಂದು ತಿಳಿದುಕೊಳ್ಳುತ್ತೀರಾ? ನಾನು ಬುದ್ಧಿವಂತ ಎಂದು ತಿಳಿದುಕೊಳ್ಳುತ್ತೀರಾ? ಪ್ರಶ್ನೆ ಅದು ಅಲ್ಲ, ದಯಮಾಡಿ ತಾವು ಉತ್ತರವನ್ನು ಕೊಡಬೇಕು.

ಶ್ರೀ ಕೆ.ಹೆಚ್. ರಂಗನಾಥ್:— ಇದನ್ನು ತಾವು ಬಹಳ ಲೈಟ್ ಆಗಿ ತೆಗೆದುಕೊಳ್ಳಿ ತಾವು ಏಕೆ ಇದನ್ನು ಸೀರಿಯಸ್ಸಾಗಿ ತೆಗೆದುಕೊಳ್ಳುತ್ತೀರಿ? ವರ್ಣಾಶ್ರಮ ಧರ್ಮ ಹುಟ್ಟಿತ್ತು, ಆ ಧರ್ಮ ಹುಟ್ಟಿದ ಮೇಲೆ ಶೂದ್ರರು, ಅತಿ ಶೂದ್ರರು, ಜಾತಿ ಉಪಜಾತಿಗಳು ಹುಟ್ಟಿಕೊಂಡವು ಎಂದು ಹೇಳುವ ರೀತಿಯಲ್ಲಿ ನಾನು ಒಂದು ಮಾತನ್ನು ಹೇಳಿರುತ್ತೇನೆ. ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳು ನನಗೆ ಫೋನ್ ಮಾಡಿ ಜನರ ಮೇಲೆ ಕೇಸ್ ಹಾಕಿ ಅರೆಸ್ಟ್ ಮಾಡಲಾಗಿದೆ ಎಂದು ಹೇಳಿದ್ದಾರೆ, ಅವರನ್ನು ಕೋರ್ಟಿಗೆ ತೆಗೆದುಕೊಂಡು ಹೋಗಿ ನಿಲ್ಲಿಸಿದ್ದಾರೆಂದು ನನಗೆ ವರ್ತಮಾನ ಬಂದಿರುತ್ತದೆ. ಅದ್ದರಿಂದ, ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆ, 11ನೇ ತಾರೀಖು ಈ ಘಟನೆ ನಡೆದಿದೆ, ಬಾಕಿ ವಿಚಾರಗಳು ನನಗೆ ಗೊತ್ತಿರುವುದಿಲ್ಲ.

ಶ್ರೀ ಬಿ. ಸೋಮಶೇಖರ್:— ಮಾನ್ಯ ಉಪಾಧ್ಯಕ್ಷರೆ, ನೀವು ವಿಚಾರವನ್ನು ತಿಳಿದುಕೊಂಡಿದ್ದೇನೆ ಎಂದು ಹೇಳಿದಿರಿ, ಯಾವ ಕೂನೂನಿನ ಮೇಲೆ ಕೇಸ್‌ಗಳನ್ನು ಬುಕ್ ಮಾಡಿದ್ದಾರೆ. ಅದರಲ್ಲಿ ನಾನ್ ಬೇಲಬಲ್ ವಾರೆಂಟ್ ಇದೆ. ಅಟ್ರಾಸಿಟಿ ಮೇಲೆ ಹಾಕಿದರೆ ಇರುವುದಿಲ್ಲ. ಯಾವ ಆಕ್ಟ್‌ನ ಪ್ರಕಾರ ಮಾಡಿದ್ದಾರೆ, ಎಂಬ ಬಗ್ಗೆ ತಾವು ಭರವಸೆಯನ್ನು ಕೊಡಬೇಕು, ಸಾಯಂಕಾಲದೊಳಗಡೆ ಮಾನ್ಯ ಗೃಹ ಸಚಿವರ ಕಡೆಯಿಂದ ಒಂದು ಹೇಳಿಕೆಯನ್ನು ಕೊಡಿಸುತ್ತೇನೆಂದು ಹೇಳಬೇಕು.

ಶ್ರೀ ಕೆ.ಹೆಚ್. ರಂಗನಾಥ್:— ಮಾನ್ಯ ಉಪಾಧ್ಯಕ್ಷರೆ, ಬಹಳ ಸೀರಿಯಸ್ಸಾಗಿ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ, ತಾವು ಬೇರೆ ಕಡೆ ಗಮನವನ್ನು ಹರಿಸಿರುವುದರಿಂದ ಇಲ್ಲಿ ತೊಂದರೆಯಾಗಿದೆ ಮಾನ್ಯ ಸದಸ್ಯರ ಅಭಿಪ್ರಾಯ ಏನಿದೆ, ಅದನ್ನು ನಾನು ಗೃಹ ಸಚಿವರಿಗೆ ತಿಳಿಸುತ್ತೇನೆ. ಅವರು ಮೇಲ್ಮನೆಯಲ್ಲಿರಬಹುದೆಂದು ನಾನು ಭಾವಿಸುತ್ತೇನೆ, ಮಾನ್ಯ ಗೃಹ ಸಚಿವರಿಗೆ ಹೇಳುತ್ತೇನೆ.

ಉಪಾಧ್ಯಕ್ಷರು :— ಮಾನ್ಯ ಗೃಹ ಮಂತ್ರಿಗಳು ಬಂದ ಮೇಲೆ ಸ್ಟೇಟ್‌ಮೆಂಟ್ ಮಾಡಲಿ.

ಶ್ರೀ ಸಿ. ಬೈರೇಗೌಡ (ವೇಮಗಲ್) :— ಕಳೆದ 5-6 ದಿನಗಳ ಹಿಂದೆ ಶೂನ್ಯವೇಳೆಯಲ್ಲಿ ತೆಗೆದುಕೊಳ್ಳುವಂತೆ ಒಂದು ಸೂಚನೆಯನ್ನು ಕಳುಹಿಸಿರುತ್ತೇನೆ. ನಾನು ನಿನ್ನೆ ಕೂಡ ಪ್ರಸ್ತಾಪ ಮಾಡಿದಾಗ, ಮಾನ್ಯ ಸಚಿವರು ಇವತ್ತು ಉತ್ತರವನ್ನು ಕೊಡುತ್ತಾರೆಂದು ಮಾನ್ಯ ಅಧ್ಯಕ್ಷರು ನನಗೆ ಹೇಳಿದ್ದರು.

ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, ಸರ್ಕಾರದ ವತಿಯಿಂದ ನನ್ನದೊಂದು ಸಬ್‌ಮಿಷನ್ ಇದೆ. ನಾನು ಪಟ್ಟಿಯನ್ನು ನೋಡಿದ ಪ್ರಕಾರ, ಶೂನ್ಯವೇಳೆಯಲ್ಲಿ ಚರ್ಚೆ ಮಾಡುವುದಕ್ಕಾಗಿ 47 ವಿಚಾರಗಳು ಬಂದಿರುತ್ತವೆ. ಇವತ್ತು ಸಭೆಯ ಕೊನೆಯ ದಿನವೆಂದು ನಾನು ಕೇಳಿದ್ದೇನೆ. ನಾನು ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಹಣಕಾಸು ವಿಧೇಯಕ ಹಾಗೂ ಆರ್ಡಿನೆನ್ಸ್ ರೀಪ್ಲೇಸ್ ಬಿಲ್‌ಗಳನ್ನು ಪ್ರೈಯಾರಿಟಿ ಮೇಲೆ ತೆಗೆದುಕೊಂಡು ಆಮೇಲೆ ಉಳಿದ ಕಾರ್ಯಕ್ರಮಗಳನ್ನು ಅಟೆಂಡ್ ಮಾಡಬೇಕು. ಇಲ್ಲದಿದ್ದರೆ ಸರ್ಕಾರದ ಕೆಲಸಗಳು ಬಹಳ ಖಂಡಿತವಾಗುತ್ತವೆ. ಆರ್ಡಿನೆನ್ಸ್ ರೀಪ್ಲೇಸ್ ಬಿಲ್‌ಗಳು ಇವತ್ತು ಆಗದಿದ್ದರೆ ಅವುಗಳು ಲ್ಯಾಪ್ಸ್ ಆಗುತ್ತವೆ.

ಶ್ರೀ ಸಿ. ಬೈರೇಗೌಡ :— ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ನಿನ್ನೆ ದಿವಸ ಇರಲಿಲ್ಲ. ಇವತ್ತು ಅವರು ಇರುವುದರಿಂದ ನಾನು ವಿಧೇಯಕವನ್ನು ಪ್ರಸ್ತಾಪ ಮಾಡುತ್ತೇನೆ. ನಿಮ್ಮ ಇಲಾಖೆಯಲ್ಲಿ ಕೆಲವು ಹುದ್ದೆಗಳಿಗೆ ಬಡ್ತಿಯನ್ನು ಕೊಡುವುದಕ್ಕೆ ದಿನಾಂಕ 10-7-2000ದಂದು ಒಂದು ಸಭೆ ನಡೆದಿದೆ, ಅವರು ಶಿಫಾರಸ್ಸುಗಳನ್ನು ಕೂಡ ಮಾಡಿದ್ದಾರೆ. ಶಿಫಾರಸ್ಸು ಮಾಡಿದರೂ ಕೂಡ ಅದು ಇದುವರೆಗೆ ಕಾರ್ಯಗತವಾಗಲಿಲ್ಲ, ಅದರ ಬಗ್ಗೆ ಪ್ರಸ್ತಾಪ ಮಾಡಿ ಒಂದು ಸೂಚನೆಯನ್ನು ಕಳುಹಿಸಿರುತ್ತೇನೆ. ದಯಮಾಡಿ ತಾವು ಇವತ್ತು ಹೇಳಿಕೆಯನ್ನು ಕೊಡಬೇಕು.

ಶ್ರೀ ಎಂ.ವೈ. ಘೋರ್ಪಡೆ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, ನಾನು ಉತ್ತರ ಕೊಡುವುದಕ್ಕೆ ಏನೂ ಆಕ್ಷೇಪಣೆ ಇರುವುದಿಲ್ಲ. ಶೂನ್ಯ ವೇಳೆಯಲ್ಲಿ ಇಂತಹ ವಿಷಯಗಳ ಬಗ್ಗೆ ಮಂತ್ರಿಗಳು ಉತ್ತರ ಕೊಡಬೇಕೆಂದು ಹೇಳುವುದು ಎಷ್ಟರಮಟ್ಟಿಗೆ ಸಮಂಜಸವಾಗಿದೆ ಹಾಗೂ ಕ್ರಮಬದ್ಧವಾಗಿದೆ ಎನ್ನುವುದರ ಬಗ್ಗೆ ತಾವು ಯೋಚನೆ ಮಾಡಬೇಕು. ಇದು ಅಡ್ಮಿನಿಸ್ಟ್ರೇಟಿವ್ ಮ್ಯಾಟರ್ ತಮಗೆ ಗೊತ್ತಿದೆ ಇದು ಆಗುತ್ತದೆ, ಅದರ ಬಗ್ಗೆ ನಿಮಗೆ ಭಯ ಏಕೆ ಇದನ್ನು ಆದಷ್ಟು ಬೇಗ ಮಾಡಿಕೊಡುತ್ತೇನೆ. ಇಂತಹ ವಿಷಯಗಳನ್ನು ನಾವು ಚರ್ಚೆಗೆ ತೆಗೆದುಕೊಳ್ಳಬೇಕೆ

ಹೇಗೆ? ಮುಖ್ಯವಾದ ಬಿಲ್‌ಗಳು ಹಾಗೂ ಕಾರ್ಯಕ್ರಮಗಳು ಇರುವುದರಿಂದ, ಇಂತಹ ಪ್ರಶ್ನೆಗಳಿಗೆ ಬರಹ ಮೂಲಕ ಬೇಕಾದರೆ ಮಾಹಿತಿ ಕೊಡುತ್ತೇನೆ. ಮಾನ್ಯ ಸದಸ್ಯರು ಬಾಯಿ ಮೂಲಕ ಉತ್ತರವನ್ನು ಕೇಳಿದರೆ ಹಾಗೆಯೇ ಉತ್ತರವನ್ನು ಕೊಡುತ್ತೇನೆ. ಹೀಗೆ ಸುಮ್ಮನೆ ಸಭೆಯಲ್ಲಿ ಕಾಲವನ್ನು ಕಳೆಯುವುದು ಎಷ್ಟರಮಟ್ಟಿಗೆ ಇದು ಸರಿಯಾಗಿದೆ. ಇದರ ಬಗ್ಗೆ ನನಗೆ ಕೆಲವು ದಿನಗಳಿಂದ ವಿಷಾದವೆನಿಸುತ್ತದೆ. ಇದರಲ್ಲಿ ಏನು ಗುಟ್ಟು ಮತ್ತು ರಹಸ್ಯಗಳಿಲ್ಲ, ಅದನ್ನು ಮಾಡುತ್ತಿದ್ದೇವೆ. ಆಡಳಿತಾತ್ಮಕವಾಗಿ ಕೆಲವು ದಿನಗಳು ಬೇಕಾಗುತ್ತದೆ. ಅದನ್ನು ಇಷ್ಟರೊಳಗಾಗಿ ಮಾಡಿಕೊಡುತ್ತೇವೆ.

ಶ್ರೀ ಸಿ. ಬೈರೇಗೌಡ (ವೇಮಗಲ್) :— ಈ ಸದನದಲ್ಲಿ ನಡೆಯುವಂತಹ ಕಲಾಪಗಳ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇಂತಹ ವಿಚಾರಗಳನ್ನು ಸದನದಲ್ಲಿ ಪ್ರಸ್ತಾಪ ಮಾಡಬಹುದೆ? ಮತ್ತೆ ಇದನ್ನು ಪ್ರಸ್ತಾಪ ಮಾಡಿದ ತಕ್ಷಣ ಮಂತ್ರಿಗಳು ಉತ್ತರವನ್ನು ಕೋಡಬೇಕೆ? ಎಂದು ಕೇಳಿದರು. ಆ ಸದನದಲ್ಲಿ ಇಂತಹ ವಿಚಾರಗಳು ಇವತ್ತು ಪ್ರಸ್ತಾಪವಾಗುತ್ತಿಲ್ಲ, ಇದು ಈ ವಿಧಾನಸಭೆಯಲ್ಲಿಯೇ ಅಲ್ಲ, ಕಳೆದ ವಿಧಾನಸಭೆಯ ಅಧಿವೇಶನದಲ್ಲಿ ಅದಕ್ಕಿಂತಲೂ ಹಿಂದಿನಿಂದ ಈ ವಿಚಾರಗಳು ಪ್ರಸ್ತಾಪವಾಗಿವೆ. ಇದಕ್ಕೆ ಸರ್ಕಾರದವರು ಉತ್ತರವನ್ನು ಕೊಟ್ಟಿರುವುದು ಸಹ ಬಂದಿದೆ ಅದು ಸರಿಯಾಗಿದೆಯೋ ಅಥವಾ ತಪ್ಪಾಗಿದೆಯೋ ಎಂಬುದನ್ನು ತೀರ್ಮಾನ ಮಾಡುವುದು ತಮಗೆ ಬಿಟ್ಟಿರುವಂತಹ ವಿಚಾರವಾಗಿದೆ. ಆದರೆ ನಾನು ನಿನ್ನೆಯ ದಿವಸ ಈ ವಿಚಾರ ಪ್ರಸ್ತಾಪ ಮಾಡಿದಾಗ, ನಾಳೆಯ ದಿವಸ ಮಂತ್ರಿಗಳು ಸದನದಲ್ಲಿದ್ದಂತಹ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದರೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆಂದು ಮಾನ್ಯ ಸಭಾಧ್ಯಕ್ಷರು ಹೇಳಿದರು. ಅದ್ದರಿಂದ ನಾನು ಇವತ್ತಿನ ದಿವಸ ಪ್ರಸ್ತಾಪವನ್ನು ಮಾಡಿದೆ ಬಹುಶ: ಅದರ ಹಿನ್ನಲೆಯ ಬಗ್ಗೆ ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲವೆಂದು ನಾನಂತೂ ಭಾವಿಸಿದ್ದೇನೆ. ಹೊಸದಾಗಿ ಇಲ್ಲಿ ಏನು ಒಂದು ರಚನೆಯನ್ನು ಮಾಡುತ್ತಿದ್ದೇವೆ, ಹೊಸ ಸಂಪ್ರದಾಯವನ್ನು ಹಾಕುತ್ತಿದ್ದೇವೆ ಅದನ್ನು ಬರುವಂತಹ ರೀತಿಯಲ್ಲಿ ಮಾನ್ಯ ಮಂತ್ರಿಗಳು ಮಾತನಾಡುವುದರಲ್ಲಿ ಅರ್ಥವಿಲ್ಲವೆಂದು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

(ಅ) ಗ್ರಾಮೀಣ ಪ್ರದೇಶದ ಮಕ್ಕಳಿಗೆ ಕೊಡುತ್ತಿದ್ದಂತಹ ಸವಲತ್ತುಗಳನ್ನು ಕಾನೂನಿನಿಂದ ಆದಂತಹ ತೊಂದರೆಯಿಂದಾಗಿ ನಿಲ್ಲಿಸಿರುವುದು.

+ ಶ್ರೀ ವೈ.ಕೆ. ರಾಮಯ್ಯ (ಹುಲಿಯೂರುದುರ್ಗ) :— ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು ಸಬ್‌ಮಿಷನ್ ಇದೆ. ಅದೇನೆಂದರೆ, ಗ್ರಾಮೀಣ ಪ್ರದೇಶದ ಮಕ್ಕಳಿಗೆ ಕೊಡುತ್ತಿದ್ದಂತಹ ಸವಲತ್ತುಗಳನ್ನು ಕಾನೂನಿನಿಂದ ಆದಂತಹ ತೊಂದರೆಯಿಂದಾಗಿ ನಿಲ್ಲಿಸಿ ಬಹಳ ದಿನಗಳಾಗಿದೆ. ಬಹುಶ: ಈ ಸದನದಲ್ಲಿರುವಂತಹ ನನ್ನ ಎಲ್ಲಾ ಸ್ನೇಹಿತರೂ ಕೂಡ ಇದರ ಬಗ್ಗೆ ಜರೂರು ಅಗತ್ಯವನ್ನು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ.